1

# ಪ್ರೀತಿ, ಕೃಪೆ, ಕರುಣೆ ಮತ್ತು ಬಾಪ್ತಿಸ್ಮ

> *"ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತರಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ" (ರೋಮಾಪುರ 5:6-8).*

ದೇವರ ಪ್ರೀತಿ, ಕೃಪೆ ಮತ್ತು ಕರುಣೆಯಿಲ್ಲದೆ, ನಾವು ಎಲ್ಲರೂ ನಿತ್ಯಶಿಕ್ಷೆಗೆ ದಂಡಿಸಲ್ಪಡುತ್ತೇವೆ. ನಾವು ಮಾಡುವಂಥ ಯಾವುದೂ ನಮ್ಮ ರಕ್ಷಣೆಗೆ ಅರ್ಹವಾಗಲಾರದು ಇಲ್ಲವೇ ನಮ್ಮ ಕ್ಷಮಾಪಣೆಯನ್ನು ಒದಗಿಸಲಾರದು. ದೇವರ ಸ್ವಭಾವವು ಮತ್ತು ಕೃತ್ಯಗಳು ನಮ್ಮ ರಕ್ಷಣೆಯನ್ನು ಒದಗಿಸಿರುವವು.

## ದೇವರ ಪ್ರೀತಿ

"ದೇವರು ಪ್ರೀತಿಸ್ವರೂಪನಾಗಿದ್ದಾನೆ" (1 ಯೋಹಾನ 4:8ಬಿ) ಎಂಬ ಹೇಳಿಕೆಯಲ್ಲಿ ದೇವರ ವರ್ಣನೆಯು ಕಂಡುಬರುತ್ತದೆ. ದೇವರ ಪ್ರೀತಿಯು ನಮ್ಮ ಪಾಪಗಳಿಗಾಗಿ ಸಾಯಲು ಯೇಸುವನ್ನು ಕೊಡುವಂತೆ ಆತನನ್ನು ಪ್ರೇರೇಪಿಸಿತು. ನಾವು ಯಾರಾಗಿದ್ದೇವೆ ಇಲ್ಲವೇ ಏನಾಗಿದ್ದೇವೆ ಎಂಬ ಕಾರಣದಿಂದಲ್ಲ, ಇಲ್ಲವೇ ನಮ್ಮ ಒಳ್ಳೆಯ ಕಾರ್ಯಗಳ ಕಾರಣದಿಂದಲ್ಲ, ಆದರೆ ದೇವರು ಯಾರಾಗಿದ್ದಾನೆ ಎಂಬ ಕಾರಣದಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ. ನಾವು ಪಾಪಿಗಳಾಗಿದ್ದಾಗಲೇ, ಕ್ಷಮಾಪಣೆಗೆ ಅಯೋಗ್ಯರಾಗಿದ್ದಾಗಲೇ ಮತ್ತು ದಂಡನೆಗೆ ಅರ್ಹರಾಗಿದ್ದಾಗಲೇ, ದೇವರು ನಮ್ಮ ಪರವಾಗಿ ಕಾರ್ಯಮಾಡಿದನು:

> ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ (ರೋಮಾಪುರ 5:8).
>
> "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು" (ಯೋಹಾನ 3:16ಎ).
>
> ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತದೆ (1 ಯೋಹಾನ 4:10).

ನಾವು ಆತನ ಪ್ರೀತಿಗೆ ಆರ್ಹರಾಗಿರದೇ ಇದ್ದರೂ, ಆತನ ಪ್ರೀತಿಯ ಕೃತ್ಯಗಳ

ಲಾಭವನ್ನು ಹೊಂದಿಕೊಳ್ಳುವದಕ್ಕಾಗಿ ನಾವು ಉತ್ತರ ಕೊಡಬೇಕು. ನಮಗಾಗಿ ಸೇವೆಯಲ್ಲಿ ಕಾರ್ಯಮಾಡಲು ದೇವರನ್ನು ಪ್ರೀತಿಯು ಪ್ರೇರೇಪಿಸಿತು. ದೇವರಿಗಾಗಿರುವ ನಮ್ಮ ಪ್ರೀತಿಯು ಆತನಿಗೆ ಸಮರ್ಪಣೆಯಲ್ಲಿ ಕಾರ್ಯಮಾಡಲು ನಮ್ಮನ್ನು ಪ್ರೋತ್ಸಾಹಿಸಬೇಕು (ಯೋಹಾನ 14:15, 21, 23). ಆತನು ನೀತಿವಂತರ ಲಾಭಕ್ಕಾಗಿ ಕಾರ್ಯಮಾಡುವನು ಆದರೆ ದುಷ್ಟರ ಮಾತಿಗೆ ಕಿವಿಗೊಡುವದಿಲ್ಲ. "ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ" (1 ಪೇತ್ರ 3:12). ಇದು ಸತ್ಯವಾಗಿದೆ ಯಾಕಂದರೆ ದೇವರು ದುಷ್ಟತ್ವವನ್ನು ಮೆಚ್ಚಿಕೊಳ್ಳುವದಿಲ್ಲ. ಆತನು ತನ್ನ ಕುಮಾರನನ್ನು ಕುರಿತು, "ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ" (ಇಬ್ರಿಯ 1:9ಎ) ಎಂದು ಹೇಳಿದ್ದಾನೆ, "ಅಧರ್ಮಿಗಳೆಲ್ಲರನ್ನೂ" ಆತನು ದ್ವೇಷಿಸುತ್ತಾನೆ (ಕೀರ್ತನೆ 5:5ಬಿ).

ಯೇಸುವಿನಲ್ಲಿ ನಂಬಿಕೆಯಿಡದೆ ಹಾಗೂ ದೇವರ ಪ್ರೀತಿಗೆ ಉತ್ತರ ಕೊಡದೆ ದುಷ್ಟತನ ಮಾಡುವವನು ಆತನ ಕೋಪದಲ್ಲಿ ಇರುವನು. ಯೋಹಾನ 3:36, "ಆತನ ಮಗನನ್ನು ನಂಬುವವನಿಗೆ ನಿತ್ಯ ಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು" ಎಂದು ಹೇಳುತ್ತದೆ. ಪೌಲನು ರೋಮಾಪುರ 2:5ರಲ್ಲಿ, "ನೀನು ನಿನ್ನ ಮೊಂಡುತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ" ಎಂದು ಎಚ್ಚರಿಸಿದನು. (ರೋಮಾಪುರ 1:18; ಎಫೆಸ 5:6; ಪ್ರಕಟನೆ 1:4, 9, 10 ಸಹ ನೋಡಿರಿ.)

ದೇವರ ಪ್ರೀತಿ ಮತ್ತು ಕೋಪ ಒಂದಕ್ಕೊಂದು ವಿರುದ್ಧವಾದವುಗಳಾಗಿರುವದಿಲ್ಲ, ಆದರೆ ಆತನ ಕೋಪವು ಆತನ ಪ್ರೀತಿಯ ಪರಿಣಾಮವಾಗಿರುತ್ತದೆ. ಕೆಲವೊಂದು ಪರಿಸ್ಥಿತಿಗಳಿಗೆ ನಾವು ಹೇಗೆ ಪ್ರತಿಕ್ರಿಯೆ ತೋರಿಸುತ್ತೇವೆಂಬದರಿಂದ ಇದನ್ನು ಉದಾಹರಿಸಬಹುದು. ತನ್ನ ಪತಿಯನ್ನು ಆಳವಾಗಿ ಪ್ರೀತಿಸುವ ಒಬ್ಬ ಮಹಿಳೆ, ಅವನು ಬೇರೆ ಸ್ತ್ರೀಯನ್ನ ಬಯಸಿದರೆ, ಬಹಳವಾಗಿ ಗಲಿಬಿಲಿಗೊಳ್ಳುತ್ತಾಳೆ. ತನ್ನ ಪತಿಯ ಕಡೆಗೆ ಆಕೆಗೆ ಪ್ರೀತಿಯಿಲ್ಲದಿದ್ದರೆ, ಅವನು ಎಷ್ಟು ಸ್ತ್ರೀಯರನ್ನು ಬಯಸಿದರೂ ಆಕೆ ಅವನ ಬಗ್ಗೆ ಕೋಪಗೊಳ್ಳುವದಿಲ್ಲ. ದೇವರ ಪ್ರೀತಿಯು ಆತನ ಅಸೂಯೇ ಮತ್ತು ರೋಷದ ತಳಹದಿಯಾಗಿರಬಹುದು (ವಿಮೋಚನಕಾಂಡ 20:5; ಧರ್ಮೋಪದೇಶಕಾಂಡ 4:24).

ದೇವರ ಪ್ರೀತಿಯಲ್ಲಿ ನಾವು ಹೇಗೆ ಇದ್ದುಳಿಯ ಬೇಕೆಂದು ಯೇಸುವು ನಮಗೆ ತೋರಿಸಿದ್ದಾನೆ ಮತ್ತು ಹೇಳಿದ್ದಾನೆ, "ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" ಎಂದು ಆತನು ಹೇಳಿದನು (ಯೋಹಾನ 15:9, 10).

ದೇವರ ಪ್ರೀತಿಯು ಶರತ್ತಿನದಾಗಿದೆ. *ವಿಶ್ವಾಸ, ಮಾನಸಾಂತರ, ಅರಿಕೆ ಮತ್ತು ಬಾಪ್ತಿಸ್ಮವು ದೇವರಿಂದ ನೇಮಿಸಲ್ಪಟ್ಟ ಅಗತ್ಯತೆಗಳಾಗಿವೆ. ಆತನು ನಮ್ಮನ್ನು ರಕ್ಷಿಸುವ ಮೊದಲು ನಾವು ಅವುಗಳನ್ನು ನೆರವೇರಿಸಬೇಕು ರಕ್ಷಿಸಲ್ಪಡಲಿಕ್ಕಾಗುವಂತೆ ಆತನಿಗಾಗಿ ನಮ್ಮ ಪ್ರೀತಿಯು ಪರಿಣಾಮವಾಗಿ ಇವುಗಳನ್ನು ನಾವು ಮಾಡತಕ್ಕದ್ದು.* ಆತನ ಪ್ರೀತಿಯ ಲಾಭಗಳನ್ನು ಸ್ವೀಕರಿಸುವದಕ್ಕಾಗಿ ನಾವು ಅಗತ್ಯತೆಗಳನ್ನು ನೆರವೇರಿಸುತ್ತೇವೆ, ಆದರೆ ಆತನ ಪ್ರೀತಿಗೆ ಅರ್ಹರಾಗುವುದಕ್ಕಾಗಿ ಅಲ್ಲ, ನಮ್ಮ ಯಾವುದೇ ಕೃತ್ಯಗಳು

ದೇವರ ಪ್ರೀತಿಯನ್ನು ಸಂಪಾದಿಸಲಾರವು, ಯಾಕಂದರೆ ಆತನು ನಮಗೆ ಬಹುಮಾನ ಕೊಡುವ ಮೊದಲು ನಾವು ಪೂರೈಸಬೇಕಾದ ಅಗತ್ಯತೆಗಳನ್ನು ಸ್ಪಷ್ಟಪಡಿಸಿದ್ದಾನೆ ಆ ಅಗತ್ಯತೆಗಳಿಗೆ ನಮ್ಮನ್ನು ಒಪ್ಪಿಸಿಕೊಳ್ಳತಕ್ಕದ್ದು. "ಆತನು ಸಿದ್ಧಿಗೆ ಬಂದು ... ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:9).

## ದೇವರ ಕೃಪೆ

ಗ್ರೀಕ ಪದ *chairs* (ಹಿಬ್ರೂ: *hen*) ಎಂಬುದು ಬಹಳ ಸಲ "ಕೃಪೆ" ಎಂದು ಭಾಷಾಂತರಿಸಲ್ಪಟ್ಟಿದ್ದು ಹೊಸ ಒಡಂಬಡಿಕೆಯಲ್ಲಿ 155 ಸಲ ಕಂಡು ಬರುತ್ತದೆ. ಈ ಪದದಿಂದ ನಾವು "charm" ಎಂಬ ಪದವನ್ನೂ ಮತ್ತು ಅದಕ್ಕೆ ಸಮನಾದವುಗಳನ್ನು ಹೊಂದಿಕೊಳ್ಳುತ್ತೇವೆ. ದೇವರ ಈ ಗುಣದ ಮೇಲೆ ನಮ್ಮ ರಕ್ಷಣೆಯು ಅವಲಂಭಿಸಿರುತ್ತದೆ. *The New International Dictionary of the Bible*ದಲ್ಲಿಯ ಒಂದು ಲೇಖನವು "ಕೃಪೆಯ" ಈ ನಿರೂಪಣೆಯನ್ನೂ ಕೊಡುತ್ತದೆ:

> (1) ಯೋಗ್ಯವಾಗಿ ಮಾತಾಡುವುದಾದರೆ, ಅದು ಆನಂದ, ಸಂತೋಷ, ಹರ್ಷ, ಆಕರ್ಷಣೆ, ಸವಿ, ರಮಣೀಯತೆಯನ್ನು ಒಳಗೊಂಡದ್ದಾಗಿರುತ್ತದೆ; (2) ಸುಚಿತ್ತ, ವಾತ್ಸಲ್ಯ, ದಯೆ ಇತ್ಯಾದಿ; (3) ಗುಲಾಮನ ಕಡೆಗೆ ಯಜಮಾನನ ದಯೆ. ಹೀಗೆ ಸಾದೃಶ್ಯತೆಯಿಂದ, ಮನುಷ್ಯನಿಗೆ ದೇವರ ದಯೆಯನ್ನು ಸೂಚಿಸಲು ಕೃಪೆಯು ಬಂದಿರುತ್ತದೆ (ಲೂಕ 1:30). [ಹೊಸ ಒಡಂಬಡಿಕೆಯ] ಬರಹಗಾರರು, ತಮ್ಮ ವಿವಿಧ ಪತ್ರಿಕೆಗಳ ಅಂತ್ಯದಲ್ಲಿ, ತಮ್ಮ ಓದುಗರ ಪರವಾಗಿ ದೇವರ ಕೃಪೆಯ ಮೆಚ್ಚಿಕೆಗಾಗಿ ಪ್ರಾರ್ಥಿಸಿದರು (ರೋಮಾಪುರ 16:20; ಫಿಲಿಪ್ಪಿ 4:23; ಕೊಲೊಸ್ಸೆ [1:2]; 1 ಥೆಸಲೊನೀಕ 5:28). ಇದಲ್ಲದೇ, "ಕೃಪೆ" ಎಂಬ ಪದವು ಅರ್ಹನಲ್ಲದವನಿಗೆ ದಯೆತೋರಿಸಲ್ಪಡುವ ತತ್ವವನ್ನು ವ್ಯಕ್ತಪಡಿಸಲು ಉಪಯೋಗಿಸಲ್ಪಟ್ಟಿರುವುದು; ಆದುದರಿಂದ ಅರ್ಹತೆಯಿಂದಾಗಿರದ ದಯೆಯು, ಮೆಚ್ಚಿಕೆಯು, ವಿಶೇಷವಾಗಿ ಯೇಸುಕ್ರಿಸ್ತನ ಮುಖಾಂತರ ಪಾಪಿಗಳಿಗೆ ಕೊಡಲ್ಪಟ್ಟಿದೆ (ಎಫೆಸ 2:4-5). ಆದುದರಿಂದ, ಕೃಪೆಯು, ಬಿದ್ದು ಹೋದ ಮನುಷ್ಯನ ಕಡೆಗೆ ಅರ್ಹತೆಯಿರದವರಿಗೆ ದೇವರ ಮೆಚ್ಚಿಕೆಯಾಗಿರುವುದು, ತಂದೆಯ ಒಬ್ಬನೇ ಕುಮಾರನೂ ಕೃಪೆಯಿಂದಲೂ ಸತ್ಯದಿಂದಲೂ ತುಂಬಿದಾತನನ್ನು (ಯೋಹಾನ 1:14) - ಮನುಷ್ಯನ ವಿಮೋಚನೆಗಾಗಿ ಒದಗಿಸಿರುವನು.[1]

ಕೃಪೆಯ ಮಹತ್ವವನ್ನು ಅತಿಶಯವಾಗಿ ಹೇಳಲಿಕ್ಕಾಗುವದಿಲ್ಲ. ಪಾಪದ ಕಾರಣದಿಂದ ನಾವು ಸಾಲದಲ್ಲಿದ್ದೇವೆ ಹಾಗೂ ನಮ್ಮ ಪಾಪಗಳಿಗಾಗಿ ಕೊಡಲು ನಮ್ಮಲ್ಲಿ ಏನೂ ಇರುವದಿಲ್ಲ. ಸಾಲದ ಮೊತ್ತವು ಯಾವುದೇ ಭಿನ್ನತೆಯನ್ನು ಮಾಡುವುದಿಲ್ಲ. ಒಬ್ಬನು ಹತ್ತು ಸಾವಿರ ರೂಪಾಯಿ ಮತ್ತು ಇನ್ನೊಬ್ಬರು ಒಂದೇ ನೂರು ರೂಪಾಯಿ ಸಾಲಕೊಡಬೇಕಾಗಿದ್ದು, ತಾನು ಕೊಡಬೇಕಾಗಿದ್ದದ್ದನ್ನು ಹಿಂದಿರುಗಿ ಕೊಡಲು ಏನೂ ಇಲ್ಲದಿದ್ದರೆ, ಅವರು ಸಾಲದಲ್ಲಿಯೇ ಇರುವರು. ಯೇಸುವಿನ ರಕ್ತವು ಇಲ್ಲದೆ, ಎಲ್ಲಾ ಪಾಪಿಗಳು (ರೋಮಾಪುರ 3:9, 10, 23), ಮರಣಕ್ಕೆ ಯೋಗ್ಯರಾಗಿರುವರು (ರೋಮಾಪುರ 6:23; ಯಾಕೋಬ 1:15), ಮತ್ತು ನಮ್ಮ ಪಾಪಗಳಿಗಾಗಿ ನಾವೇ ಸ್ವತಃ ಕೊಡುವದಕ್ಕಾಗಿ ಏನೂ ಇಲ್ಲದಿರುವೆವು.

ಒಂದು ನೂರು ರೂಪಾಯಿಯ ಸಾಲವು ಕ್ಷಮಿಸಲ್ಪಟ್ಟ ವ್ಯಕ್ತಿಯು ಮತ್ತು

ಹತ್ತು ಸಾವಿರ ರೂಪಾಯಿಯ ಸಾಲವು ಕ್ಷಮಿಸಲ್ಪಟ್ಟ ವ್ಯಕ್ತಿಯು ಸಮಾನವಾಗಿ ಸಾಲವಿಲ್ಲದವರಾಗಿರುವರು. ಒಂದು ಪಾಪವನ್ನಾಗಲೀ ಇಲ್ಲವೇ ಅನೇಕ ಪಾಪಗಳನ್ನಾಗಲೀ ಕ್ಷಮಿಸಲ್ಪಪಟ್ಟವರು ಸಮಾನವಾಗಿ ಕ್ಷಮಿಸಲ್ಪಟ್ಟಿರುವರು ಮತ್ತು ತಮ್ಮ ಪಾಪಗಳಿಂದ ಬಿಡುಗಡೆ ಆಗಿರುವರು. ಪಾಪಿಯಾದ ಸ್ತ್ರೀಯನ್ನು ಕ್ಷಮಿಸಿದ್ದಕ್ಕಾಗಿ ಒಬ್ಬ ಫರಿಸಾಯನು ಯೇಸುವನ್ನು ಟೀಕಿಸಿದ್ದಾಗ, ಯೇಸುವು, "ನಾನು ಹೇಳುವ ಮಾತೇನಂದರೆ - ಇವಳ ಪಾಪಗಳು ಬಹಳವಾಗಿದ್ದರೂ ಅವು ಕ್ಷಮಿಸಲ್ಪಟ್ಟಿವೆ. ಇದಕ್ಕೆ ಪ್ರಮಾಣವೇನಂದರೆ ಇವಳು ತೋರಿಸಿದ ಪ್ರೀತಿಯು ಸ್ವಲ್ಪವೇ" ಎಂದು ಹೇಳಿದನು (ಲೂಕ 7:47). ಇದು ದೇವರ ಕೃಪೆಯ ಸೌಂದರ್ಯವಾಗಿದೆ.

ಯೇಸುವು ಕೃಪೆಯಿಂದ ತುಂಬಿದವನಾಗಿದ್ದು (ಯೋಹಾನ 1:14), ನಮಗಾಗಿ ಕೃಪೆಯನ್ನು ಒದಗಿಸಿದ್ದಾನೆ (ಯೋಹಾನ 1:16). ಮಾನವನ ಎಲ್ಲಾ ಕೃತ್ಯಗಳು ಪಾಪದ ಒಂದು ಕಲೆಯನ್ನಾದರೂ ತೆಗೆದು ಹಾಕಲಾರದು (ಎಫೆಸ 2:8) ಮೋಶೆಯ ಧರ್ಮಶಾಸ್ತ್ರವೂ (ಯೋಹಾನ 1:17) ಪಾಪವನ್ನು ತೆಗೆದು ಹಾಕಲಾರದು, ಯಾಕಂದರೆ ಅದು ಕೃಪೆಯನ್ನು ಒದಗಿಸಲಿಲ್ಲ (ಗಲಾತ್ಯ 5:4). "ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ, ಯಾಕಂದರೆ ಧರ್ಮಶಾಸ್ತ್ರದ ಮುಖಾಂತರ ನೀತಿಯುಂಟಾಗುವದಾದರೆ, ಕ್ರಿಸ್ತನು ಮರಣಹೊಂದಿದ್ದಕ್ಕೆ ಕಾರಣವೇ ಇಲ್ಲ" (ಗಲಾತ್ಯ 2:21) ಎಂದು ಪೌಲನು ಬರೆದನು.

ನಮ್ಮ ನೀತಿ ಮತ್ತು ರಕ್ಷಣೆಯು "ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ" ಒದಗಿಸಲ್ಪಟ್ಟಿವೆ (ರೋಮಾಪುರ 3:24). ನಾವು ಹೀಗೆ ಓದುತ್ತೇವೆ,

> ಯಾಕಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು; ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ (ರೋಮಾಪುರ 6:14).
>
> ಕೃಪೆಯಿಂದ ಆದುಕೊಂಡನು ಅಂದ ಮೇಲೆ ಪುಣ್ಯಕ್ರಿಯೆಗಳ ಕಾರಣದಿಂದ ಆದುಕೊಳ್ಳಲಿಲ್ಲವಷ್ಟೆ; ಹಾಗಲ್ಲದ ಪಕ್ಷಕ್ಕೆ ಕೃಪೆಯನ್ನು ಇನ್ನು ಕೃಪೆಯನ್ನುವದಕ್ಕಾಗುವದಿಲ್ಲ (ರೋಮಾಪುರ 11:6).
>
> ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ (ಎಫೆಸ 2:8, 9).

ರಕ್ಷಣೆಯು ನಮ್ಮ ಕಾರ್ಯಗಳಿಂದ ಅಲ್ಲ, ಆದರೆ ದೇವರ ಕಾರ್ಯದಿಂದ ಒದಗಿಸಲ್ಪಡುತ್ತದೆ.

ದೇವರ ಕೃಪೆಯು, ಆತನು ಅನರ್ಹರಾದವರಿಗೆ ಕೊಡುವ ಮೆಚ್ಚಿಕೆಯು ಪ್ರತಿಯೊಬ್ಬನಿಗೂ ಲಭ್ಯವಿರುವಾಗ (ತೀತ 2:11), ಎಲ್ಲರೂ ಆತನ ಕೃಪೆಯನ್ನು ಹೊಂದಿಕೊಳ್ಳುವದಿಲ್ಲ. ಯೇಸುವಿನ ಮುಖಾಂತರ ಕೃಪೆಯು ಬಂದದ್ದರಿಂದ (ಯೋಹಾನ 1:17; ರೋಮಾಪುರ 5:15), ಆತನನ್ನು ಸ್ವೀಕರಿಸದೇ ಇರುವವರು (ಯೋಹಾನ 1:11; 12:48) ದೇವರ ಕೃಪೆಯನ್ನು ತಿರಸ್ಕರಿಸುವರು. ಯೇಸುವು, ದೇವರ ಕೃಪೆಯ ನಿಮಿತ್ತವಾಗಿ, ನಮ್ಮ ರಕ್ಷಣೆಗಾಗಿ ತನ್ನ ರಕ್ತ ಕ್ರಯ ಕೊಟ್ಟಿದ್ದಾನೆ (ಅಪೊಸ್ತಲರ ಕೃತ್ಯಗಳು 20:28; ಇಬ್ರಿಯ 9:14; 10:19, 20; 1 ಪೇತ್ರ 1:17-19). ಆದುದರಿಂದ, ಆತನು ತಾನು ಆಯ್ದುಕೊಳ್ಳುವವರಿಗೆ ಮತ್ತು ತಾನು ಆಯ್ದುಕೊಳ್ಳುವ ಯಾವುದೇ ಶರತ್ತುಗಳ ಮೇಲೆ ರಕ್ಷಣೆಯನ್ನು ಕೊಡಲು ಹಕ್ಕುಳ್ಳವನಾಗಿರುತ್ತಾನೆ (ಇಬ್ರಿಯ 5:9).

ರೋಮಾಪುರ 6ರಲ್ಲಿ ಪೌಲನು, "ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ?"; "ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ?" ಎಂದು ಪ್ರಶ್ನಿಸಿದನು (ವಚನಗಳು 1, 2) ನಾವು ಕೃಪೆಯೊಳಗೆ ಪ್ರವೇಶಿಸುವಾಗ, ಪಾಪಕ್ಕೆ ನಾವು ಸಾಯಬೇಕು ಮತ್ತು ರೂಢಿಯಾಗಿ ಪಾಪ ಮಾಡುವದನ್ನು ನಿಲ್ಲಿಸಬೇಕು ಎಂಬುದನ್ನು ಈ ಪ್ರಶ್ನೆಗಳು ಅನ್ವಯಿಸುತ್ತವೆ. ಪೌಲನು ಇನ್ನೊಂದು ಪ್ರಶ್ನೆಯನ್ನು ಕೇಳುವದರಿಂದ ಇಂದು ಸಂಭವಿಸಬೇಕಾದ ಸಮಯವನ್ನು ಗುರುತಿಸಿದನು: "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ವಚನ 3). ಆ ಮೇಲೆ ಅವನು, "ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ವಚನ 4) ಎಂದು ಬರೆದನು.

ಪೌಲನ ಮಾತುಗಳಿಂದ, ನಾವು ಬಾಪ್ತಿಸ್ಮ ಹೊಂದಿದಾಗ, ನಾವು ದೇವರ ಕೃಪೆಯೊಳಗೆ ಪ್ರವೇಶಿಸುತ್ತೇವೆ ಎಂದು ನಿರ್ಣಯಿಸಬಹುದು. ಯೇಸುವಿನಲ್ಲಿ ನಾವು ಬಾಪ್ತಿಸ್ಮ ಹೊಂದಿದಾಗ (ರೋಮಾಪರ 6:3), ಎಫೆಸ 1:7 ಮತ್ತು 2 ತಿಮೊಥೆ 2:1ರಲ್ಲಿ ನೋಡಿದಂತೆ, ಯೇಸುವಿನಲ್ಲಿ ಇರುವಂಥ, ದೇವರ ಕೃಪೆಯನ್ನು ನಾವು ಹೊಂದಿಕೊಳ್ಳುತ್ತೇವೆ. ಈ ವಾಕ್ಯಭಾಗಗಳು ಆತನ ಕೃಪೆಯೊಳಗೆ ಪ್ರವೇಶಿಸುವದರೊಂದಿಗೆ ಬಾಪ್ತಿಸ್ಮವನ್ನು ಸಂಬಂಧಿಸುತ್ತವೆ. ಬಾಪ್ತಿಸ್ಮ ಹೊಂದದೇ ಇರುವವರು ಕ್ರಿಸ್ತನ ಹೊರಗೆ ಇರುವರು, ಕ್ರಿಸ್ತನಿಂದ ಬೇರ್ಪಡಿಸಲ್ಪಟ್ಟಿರುವರು (ಎಫೆಸ 2:12, 13), ಮತ್ತು ಕ್ರಿಸ್ತನಲ್ಲಿದ್ದಂಥ ಕೃಪೆಯಿಲ್ಲದೆ ಇರುವರು (ಗಲಾತ್ಯ 5:4). ದೇವರ ಕೃಪೆಯು ಬಾಪ್ತಿಸ್ಮದಲ್ಲಿ ಸಂಪಾದಿಸಲ್ಪಡುವದಿಲ್ಲ, ಆದರೆ ಒಬ್ಬನ ನಂಬಿಕೆಯ ಕಾರಣದಿಂದ ಅವನು ಬಾಪ್ತಿಸ್ಮ ಹೊಂದಿದಾಗ ಒಳಗೆ ಪ್ರವೇಶಿಸುತ್ತದೆ. ಪಾಪಭರಿತ ಜೀವಿತಗಳನ್ನು ನಡಿಸುವದನ್ನು ಮುಂದುವರಿಸುವದರಿಂದ ಆತನ ಕೃಪೆಯ ಮೇಲೆ ನಾವು ಭಾರ ಹೊರಿಸಬಾರದು. ಒಮ್ಮೆ "ಪರಿಶುದ್ಧ ಮಾಡಲ್ಪಟ್ಟವರು" ಬೇಕೆಂತಲೇ "ಪಾಪಮಾಡುತ್ತಾ ಹೋದರೆ," ಅವರು "ಕೃಪಾ ವರವಾಗಿರುವ" ಆತ್ಮನನ್ನು ತಿರಸ್ಕರಿಸುವರು. ಇಬ್ರಿಯ 10:26-29 ಹೀಗೆ ಹೇಳುತ್ತದೆ,

> ಯಾಕಂದರೆ, ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪ ಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ; ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೇ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೇ. ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪರಿಶುದ್ಧಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬದನ್ನು ಯೋಚಿಸಿರಿ?

## ದೇವರ ಕರುಣೆ

"ಕರುಣೆ" (ಗ್ರೀಕ: ಕ್ರಿಯಾಪದ - *eleeo*; ನಾಮಪದ - *eleos*) ಅಥವಾ, "ವಿರೋಧಿಯ ಮೇಲೆ ಇಲ್ಲವೇ ನಿಯಮ ಮೀರುವವನಿಗೆ ಶಿಕ್ಷೆ ವಿಧಿಸುವದನ್ನು ತಡೆಹಿಡಿಯುವುದು; ಬಲಹೀನನಿಗೆ, ರೋಗಿಗೆ ಇಲ್ಲವೇ ಬಡವನಿಗೆ ಸಹಾಯ ಮಾಡಲಿಕ್ಕೆ ಕಾರಣವಾಗುವ ಅನುಕಂಪ" ಎಂಬುದು.[2] ಅದು ಸಾಲವನ್ನು ಹಿಂದಿರುಗಿ ಕೊಡುವದನ್ನೂ ಒಳಗೊಂಡಿರುವದಿಲ್ಲ (ಮತ್ತಾಯ 18:33). ಕೃಪೆಯು ಕರುಣೆಯನ್ನು ಒಳಗೊಂಡಿದ್ದರೂ, ಕೃಪೆಯು ಕರುಣೆಯನ್ನು ದಾಟಿ ಹೋಗುತ್ತದೆ. ಕೃಪೆ ಮತ್ತು ಕರುಣೆ ಎರಡೂ ತಪ್ಪನ್ನು ಶಿಕ್ಷಿಸುವದನ್ನು ತಡೆಹಿಡಿಯುತ್ತವೆ; ಹಾಗಿದ್ದರೂ, ತಪ್ಪನ್ನು ಮಾಡಿದವನಿಗೆ ಸಹಾಯವನ್ನು ಒದಗಿಸುತ್ತ ಕೃಪೆಯು ಇನ್ನೂ ಮುಂದೆ ಹೋಗುತ್ತದೆ.

ಮನೆಯಿಲ್ಲದ ಒಬ್ಬ ಮನುಷ್ಯನು ಉದ್ದೇಶ ಪೂರ್ವಕವಾಗಿ ಒಂದು ಮನೆಗೆ ಹಾನಿಮಾಡಿದರೆ, ಮನೆಯ ಯಜಮಾನನು ಹಾನಿಮಾಡಿದ್ದಕ್ಕಾಗಿ ಆ ಮನುಷ್ಯನನ್ನು ಶಿಕ್ಷಿಸಬಹುದು ಮತ್ತು/ಇಲ್ಲವೇ ಪರಿಹಾರವನ್ನು ಕೇಳಬಹುದು. ದುಷ್ಟತನ ಮಾಡಿದವನಿಂದ ಪರಿಹಾರವನ್ನು ಕೇಳುವದನ್ನು ಇಲ್ಲವೇ ಅವನನ್ನು ದಂಡಿಸುವದನ್ನು ಮಾಡದೇ ಹೋದರೆ, ಯಜಮಾನನು ಅವನಿಗೆ ಕರುಣೆ ತೋರಿಸುತ್ತಿರುವನು. ಯಜಮಾನನು ಆ ಮನುಷ್ಯನನ್ನು ಕ್ಷಮಿಸಿ, ಅವನಿಗೆ ಇರಲು ಸ್ಥಳವನ್ನು ಕೊಟ್ಟರೆ, ಅದು ಕೃಪೆಯ ಒಂದು ಕಾರ್ಯವಾಗಿರುವುದು.

ತನ್ನ ಚಿತ್ತಕ್ಕೆ ವಿಧೇಯರಾಗುವವರಿಗೆ, ದೇವರು ಕರುಣೆಯಿಂದ ಕ್ಷಮಾಪಣೆಯನ್ನೂ ಶಿಕ್ಷೆಯಿಂದ ಬಿಡುಗಡೆಯನ್ನೂ ಸಿದ್ಧಪಡಿಸಿರುವನು. ತನ್ನ ಕೃಪೆಯ ನಿಮಿತ್ತವಾಗಿ, ಪರಲೋಕದಲ್ಲಿ ನಿತ್ಯಜೀವವನ್ನು ಒದಗಿಸಲು ಆತನು ಸಿದ್ಧಪಡಿಸಿರುವನು. ದೇವರ ಕರುಣೆಯು ಪಾಪಿಯನ್ನು ದಂಡಿಸುವದರಿಂದ ದೂರವಿಡುವುದು, ಮತ್ತು ಆತನ ಕೃಪೆಯು ಅರ್ಹವಲ್ಲದ ಆಶೀರ್ವಾದಗಳನ್ನು ಒದಗಿಸಲು ಪ್ರಚೋಧಿಸುವುದು.

"ದೇವರು ಎಲ್ಲರಿಗೂ ಕರುಣೆಯನ್ನೂ ತೋರಿಸಬೇಕೆಂಬ ಉದ್ದೇಶವುಳ್ಳವನಾಗಿದ್ದು ಎಲ್ಲರನ್ನೂ ಅವಿಧೇಯತೆಯೆಂಬ ದುಸ್ಥಿತಿಯಲ್ಲಿ ಕಟ್ಟಿಹಾಕಿದ್ದಾನೆ" (ರೋಮಾಪುರ 11:32; NIV). ಕರುಣೆಯ ಮೊದಲು ಅವಿಧೇಯರಾಗಿದ್ದು, ಈಗ ವಿಧೇಯ ಪಾಪಿಗಳಾದವರ ಕ್ಷಮಾಪಣೆಯೊಂದಿಗೆ ಸಂಬಂಧಿಸಿದೆ. ಪೌಲನು ತನ್ನನ್ನು ಕರುಣೆಹೊಂದಿದ ಪಾಪಿಗಳಲ್ಲಿ ತಾನೇ ಮುಖ್ಯನೆಂದು ಹೇಳಿಕೊಂಡನು (1 ತಿಮೊಥೆ 1:15, 16). ದೇವರ ಕ್ಷಮಾಪಣೆ ಮತ್ತು ಕರುಣೆಯು ಪೌಲನಿಗೆ ದಮಸ್ಕ ಪಟ್ಟಣದಲ್ಲಿ ತೋರಿಸಲ್ಪಟ್ಟವು. "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಎಂದು ಅನನೀಯನು ಪೌಲನಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 22:16). *ಪೌಲನು ಬಾಪ್ತಿಸ್ಮ ಹೊಂದಿದಾಗ, ಅವನು ದೇವರ ಕರುಣೆಯನ್ನು ಸಂಪಾದಿಸಲಿಲ್ಲ; ಆದರೆ ದೇವರ ಕೃಪೆ ಮತ್ತು ಕರುಣೆಯ ಮುಖಾಂತರ ಒದಗಿಸಲ್ಪಟ್ಟ ಕ್ಷಮಾಪಣೆಯೊಳಗೆ ಅವನು ಪ್ರವೇಶಿಸಿದನು.*

## ಸಾರಾಂಶ

ನಾವು ಪಾಪಿಗಳಾಗಿದ್ದರೂ, ದೇವರ ಪ್ರೀತೀ, ಕೃಪೆ ಮತ್ತು ಕರುಣೆಯು ಆತನು ನಮಗೆ ಸಹಾಯ ಮಾಡುವಂತೆ ಪ್ರಚೋಧಿಸಿದವು. ಅಂಥ ಆಶೀರ್ವಾದಗಳನ್ನು ಪಡೆಯಲು ಅರ್ಹರಾಗಲು ನಾವೇನೂ ಮಾಡಲಾರೆವು; ಹೀಗಿದ್ದರೂ ಅವುಗಳನ್ನು ಪಡೆದುಕೊಳ್ಳಲು ನಾವು ದೇವರಿಗೆ ವಿಧೇಯರಾಗಬೇಕು. ನಂಬಿಕೆ, ಮಾನಸಾಂತರ,

ಅರಿಕೆ ಮತ್ತು ಬಾಪ್ತಿಸ್ಮ ಇವುಗಳು ದೇವರ ಆಶೀರ್ವಾದಗಳನ್ನು ಹೊಂದಲಿಕ್ಕೆ ಯೋಗ್ಯವಾದ, ಅರ್ಹತೆಯುಳ್ಳ ಕೃತ್ಯಗಳಾಗಿರುವದಿಲ್ಲ; ಆದರೆ, ತನ್ನ ಕೃಪೆ ಮತ್ತು ಕರುಣೆಯಲ್ಲಿ ತನ್ನ ವಾಗ್ದಾತ್ತ ಆಶೀರ್ವಾದಗಳನ್ನು ನಮಗೆ ಕೊಡುವ ದೇವರ ಎದುರಿನಲ್ಲಿ ನಾವು ಪೂರೈಸಬೇಕಾದ ಅಗತ್ಯತೆಗಳು ಅವಾಗಿರುತ್ತವೆ.

---

ಟಿಪ್ಪಣೆಗಳು

[1]J. D. Douglas and Merrill C. Tenney, eds., “grace,” in *The New International Dictionary of the Bible* (Grand Rapids, Mich.: Regency Reference Library, Zondervan Publishing House, 1987), 401. [2]J. D. Douglas and Merrill C. Tenney, eds., “mercy,” in *The New International Dictionary of the Bible* (Grand Rapids, Mich.: Regency Reference Library, Zondervan Publishing House, 1987), 641.

© 2009 Truth for Today